ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಕರ್ನಾಟಕ ವಿಧಾನ ಸಭೆ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ ದಿನಾಂಕ : DATE : 11/04/2019

# ಕಂಪ್ಲಿ ಶಾಸಕ ಜೆ.ಎನ್.ಗಣೇಶ್ ಜಾಮೀನು ಅರ್ಜಿ: ತೀರ್ಪು ಕಾಯ್ದಿರಿಸಿದ ಹೈಕೋರ್ಟ್

ವಿ.ಕ 11/4/19

**ಬೆಂಗಳೂರು:** ಬಿಡದಿಯ ಈಗಲ್‌ಟನ್ ರೆಸಾರ್ಟ್‌ನಲ್ಲಿ ಕಾಂಗ್ರೆಸ್ ಶಾಸಕ ಆನಂದ್ ಸಿಂಗ್ ಮೇಲೆ ಹಲ್ಲೆ ನಡೆಸಿದ ಪ್ರಕರಣದ ಆರೋಪಿ ಕಂಪ್ಲಿ ಶಾಸಕ ಜೆ.ಎನ್. ಗಣೇಶ್ ಜಾಮೀನು ಅರ್ಜಿ ಕುರಿತು ವಾದ- ಪ್ರತಿವಾದ ಆಲಿಸಿದ ಹೈಕೋರ್ಟ್ ತೀರ್ಪು ಕಾಯ್ದಿರಿಸಿದೆ.

ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಮಾ.25ರಂದು ಜಾಮೀನು ಅರ್ಜಿ ವಜಾಗೊಳಿಸಿದ್ದನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿ ಕುರಿತು ಬುಧವಾರ ಎರಡೂ ಕಡೆ ವಾದ ಆಲಿಸಿದ ಬಳಿಕ ನ್ಯಾ.ಬಿ.ಎ. ಪಾಟೀಲ್ ಅವರಿದ್ದ ಏಕ ಸದಸ್ಯಪೀಠ ತೀರ್ಪು ಕಾಯ್ದಿರಿಸಿರುವುದಾಗಿ ಪ್ರಕಟಿಸಿತು.

ಕಂಪ್ಲಿ ಗಣೇಶ್ ಪರ ವಾದ ಮಂಡಿಸಿದ ಹಿರಿಯ ನ್ಯಾಯವಾದಿ ಬಿ.ವಿ. ಆಚಾರ್ಯ, "ಇದು ಪೂರ್ವಯೋಜಿತ ಹಲ್ಲೆ ಅಲ್ಲ, ಆ ರೀತಿಯ ಉದ್ದೇಶವೂ ಅರ್ಜಿದಾರರಿಗೆ ಇರಲಿಲ್ಲ. ಮೊದಲಿಗೆ ಆನಂದ್ ಸಿಂಗ್ ಸ್ವತಃ ಹಲ್ಲೆ ನಡೆಸಿದ್ದರು. ಆನಂತರ ಅರ್ಜಿದಾರರು ಆತ್ಮರಕ್ಷಣೆಗಾಗಿ ಪ್ರತಿದಾಳಿ ನಡೆಸಿದ್ದಾರೆ. ಘಟನೆ ನಡೆದ ಮೇಲೆ ಅಲ್ಲಿದ್ದ ಇತರ ಶಾಸಕರು ದೂರು ನೀಡಿಲ್ಲ. ಆಸ್ಪತ್ರೆ ಸಿಬ್ಬಂದಿಗಳೇ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ," ಎಂದರು.

"ಗಲಾಟೆ ನಡೆದಿರುವುದನ್ನು ಆರೋಪಿ ನಿರಾಕರಿಸುತ್ತಿಲ್ಲ, ಆದರೆ ಇದು ಆತ್ಮರಕ್ಷಣೆಗಾಗಿ ನಡೆದ ಘಟನೆಯಷ್ಟೇ. ಘಟನೆ ಸಂಬಂಧ ತನಿಖಾಧಿಕಾರಿಗಳು ಕೆಲ ಸತ್ಯ ಸಂಗತಿಗಳನ್ನು ಮರೆ ಮಾಚಿದ್ದಾರೆ. ಪೊಲೀಸರ ವಾದದಲ್ಲಿ ಸತ್ವಾಂಶ ಇಲ್ಲ. ಆನಂದ್ ಸಿಂಗ್ ಮೇಲೆ 14 ಕ್ರಿಮಿನಲ್ ಕೇಸುಗಳಿವೆ. ಪ್ರಕರಣದಲ್ಲಿ ಬಹುತೇಕ ತನಿಖೆ ಮುಗಿದಿದೆ. ಆದ್ದರಿಂದ ಜಾಮೀನು ನೀಡಬೇಕು," ಎಂದು ಹೇಳಿದರು.

ಅರ್ಜಿದಾರ ಗಣೇಶ್, "ನನ್ನ ಮೇಲೆ ಐಪಿಸಿ ಸೆಕ್ಷನ್ 307ರ ಅನ್ವಯ ಕೊಲೆ ಯತ್ನ ಆರೋಪ ಹೊರಿಸಲಾಗಿದೆ. ಆನಂದ್ ಸಿಂಗ್‌ಗೆ ಸಣ್ಣ ಪುಟ್ಟ ಗಾಯಗಳಾಗಿದ್ದವಷ್ಟೇ. ಘಟನೆಯಲ್ಲಿ ನನಗೂ ಗಾಯಗಳಾಗಿತ್ತು. ಚುನಾವಣೆ ಕೆಲಸ ಕಾರ್ಯಗಳನ್ನು ಮಾಡಬೇಕಾಗಿರುವುದರಿಂದ ಜಾಮೀನು ನೀಡಬೇಕು," ಎಂದು ಅರ್ಜಿಯಲ್ಲಿ ಮನವಿ ಮಾಡಿದ್ದಾರೆ.